ದಿಃ 09.01.2018 OS 240/ 2014 PW-1

09.01.2018 ರಂದು ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

*ಪಾಟೀ ಸವಾಲು ಃ ಶ್ರೀ. ಎಂ.ಕೆ.ಎನ್. ವಕೀಲರಿಂದಃ*

*ನನ್ನ ಗಂಡನ ಅಜ್ಜನ ಹೆಸರು ಸಹ ಲಿಂಗೇಗೌಡ. ನನ್ನ ಗಂಡನ ಅಪ್ಪನ ಹೆಸರು ಸಹ ಲಿಂಗೇಗೌಡ ನನ್ನ ಗಂಡನ ಅಜ್ಜ ಲಿಂಗೇಗೌಡರ ಮಗ ರಾಜೇಗೌಡ ಅವಿವಾಹಿತ ಎಂದರೆ ನನಗೆ ಗೊತ್ತಿಲ್ಲ.*

*ದಾವಾ ತಪಶೀಲು ಸ್ವತ್ತು 1ನೇ ಸ್ವತ್ತು ನನ್ನ ಮಾವ ಲಿಂಗೇಗೌಡ ಹಾಗೂ 1ನೇ ಪ್ರತಿವಾದಿಯ ತಂದೆ ಮಂಚೇಗೌಡರ ಮಧ್ಯ ಸಮವಾಗಿ ವಿಭಾಗವಾಗಿತ್ತು ಎಂದರೆ ಸರಿ. ದಾವಾ ತಪಶೀಲು 1ನೇ ಸ್ವತ್ತು ಮೂಲತಹಃ 1 ಎಕರೆ 1 ಗುಂಟೆ ಇತ್ತು ಎಂದರೆ ಗೊತ್ತಿಲ್ಲ.*

*ದಾವಾ ತಪಶೀಲು ಸ್ವತ್ತುಗಳ ಚಕ್ಕುಬಂದಿ ಹೇಳಲು ನನಗೆ ತಿಳಿಯುವುದಿಲ್ಲ. ದಾವಾ ತಪಶೀಲು ಸ್ವತ್ತು 1ನೆ ಐಟಂ ಸ್ವತ್ತಿನ ಚಕ್ಕುಬಂದಿಯನ್ನು ನನ್ನ ಸೊಸೆ ಹೇಳಿ ಬರೆಸಿರುತ್ತಾರೆ. ದಾವಾ ತಪಶೀಲು ಸ್ವತ್ತು 1ನೇ ಐಟಂ ದಕ್ಷಿಣಕ್ಕೆ 1ನೇ ಪ್ರತಿವಾದಿಯ ಸ್ವತ್ತು ಬರುತ್ತದೆ. ದಾವಾ ತಪಶೀಲು ಸ್ವತ್ತು 1ನೇ ಸ್ವತ್ತಿನ ಪಶ್ಚಿಮದಿಂದ ಪೂರ್ವದ ಕಡೆಗೆ ಒಂದು ರಸ್ತೆ ಹಾದುಹೋಗುತ್ತದೆ ಎಂದರೆ ಸರಿ, ಮುಖ್ಯ ರಸ್ತೆಯಿಂದ ನಮ್ಮ ಜಮೀನಿನ ಕಡೆ ಬರುತ್ತದೆ. ಸದರಿ ರಸ್ತೆ ಪೂಜರಿ ನಾಗೇಶ್‌ರವರ ಜಮೀನಿಗೆ ಕೊನೆಯಾಗುತ್ತದೆ ಎಂದರೆ ಸರಿ. ಸದರಿ ನಾಗೇಶ್ ರವರ ಜಮೀನು ಪೂರ್ವಕ್ಕೆ ಬರುತ್ತದೆ ಎಂದರೆ ಸರಿ. ಸದರಿ ರಸ್ತೆ ಜನರು ಓಡಾಡಲು ಬಿಟ್ಟು ಕೊಂಡಿರುವ ರಸ್ತೆ ಎಂದರೆ ಸರಿ. ಸದರಿ ರಸ್ತೆ ಕ್ರಮ ಅನುಸರಿಸಿದ್ದಾರೆ 1ನೇ ಪ್ರತಿವಾದಿನ ಸ್ವತ್ತು ಬಂದು ನಂತರ ನನ್ನ ಜಮೀನು ಬರುತ್ತದೆ ಎಂದರೆ ಸರಿ.ಮುಂದು ನನ್ನ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ತಿಳಿದಿಲ್ಲ. ಪ್ರತಿವಾದಿಗಳು ಯಾವ ದಿಕ್ಕಿನಲ್ಲಿ ತೊಂದರೆ ಕೊಡುತ್ತಿದ್ದಾರೆ ಎಂದು ನಾನು ವಾದ ಪತ್ರದಲ್ಲಿ ಬರೆದಿಲ್ಲ ಎಂದರೆ ಸರಿ. ವಾದಿ ಮುಂದೆವರೆದು ವಾದಿಗಳು ಎಷ್ಟು ತೊಂದರೆ ಕೊಟ್ಟರು ಸಹ ನಾನು ಹೇಳಿಲ್ಲ ಎಂದು ನುಡಿಯುತ್ತಾರೆ.*

1 ರಿಂದ 3ನೇ ಪ್ರತಿವಾದಿಗಳು ನನಗೆ ಯಾವುದೇ ತೊಂದರೆ ನೀಡುತ್ತಿಲ್ಲ ಎಂದರೆ ಸುಳುಳ . ಬದಲಾಗಿ ನಾನೇ ಪ್ರತಿವಾದಿಗಳಿಗೆ ಸೇರಿದ ಜಮೀನನ್ನು ಕಬಳಿಸಲು ನಾನು ಸದರಿ ದಾವೆ ಹೂಡಿದ್ದೇನೆ ಎಂದರೆ ಸುಳ್ಳು. ದಾವಾ ತಪಶೀಲು 1ನೇ ಸ್ವತ್ತು ನನ್ನ ಸ್ವಾಧೀನದಲಿಲ್ಲ ಬದಲಾಗಿ ಕೇವಲ 20.1/2 ಗುಂಟೆಯಲ್ಲಿ ಮಾತ್ರ ಸ್ವಾಧೀನದಲ್ಲಿದ್ದೇನೆ ಎಂದರೆ ಪೂರ್ತ ನಾನೇ ಪಹಣಿಯಲ್ಲಿ ನನ್ನ ಹೆಸರಿಗೆ ಬಂದಂತೆ ಇದ್ದೇನೆ. ನಾನು ಅಳತೆ ಮಾಡಿಸಿಲ್ಲ. ನಾನು ಸುಳ್ಳು ದಾಖಲೆಗಳನ್ನು ಹಾಜರುಪಡಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

ಪ್ರತಿವಾದಿ 4-5 ಪರ ವಕೀಲರು ಪಾಟೀ ಸವಾಲೀಗೆ ಸಮಯ ಕೋರಿರುತ್ತಾರೆ ಸಮಯ ನೀಡಲಾಯಿತು.

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಓ

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಚನ್ನಪಟ್ಟಣ.